ತುತ್ತುಗಳನ್ನು ಇಡುತ್ತಿದ್ದರು. ಊಟವನ್ನು ಕೂಡ ಮಾಡುವಂತಹ ಸ್ಥಿತಿಯಲ್ಲಿ ಕೆಲವು ವೃದ್ಧರಿರಲಿಲ್ಲ. ಅಂತಹವರಿಗೆ ಸ್ವಯಂ ಸೇವಕರೇ ಊಟ ಮಾಡಿಸುತ್ತಿದ್ದರು. ಬಾಳೆ ಎಲೆಯ ಮೇಲೆ ಬಿಸಿಬಿಸಿ ಕುಚ್ಚಿಲಕ್ಕಿ ಅನ್ನ, ಕಾಣೆ ಮೀನಿನ ಕರಿ ಮತ್ತು ಅಂಜಲ್ ತವಾ ಫ್ರೈ ಬಡಿಸಿದ್ದರು. ಊಟದ ರುಚಿ ಅಮೋಘವಾಗಿತ್ತು. ಅಲ್ಲಿದ್ದವರಿಗೆಲ್ಲ ಅದೇ ಊಟ. ಅಲ್ಲಿನ ಕೆಲಸಗಾರರು ನಿಸ್ಪೃಹತೆಯಿಂದ ಕೆಲಸ ಮಾಡುತ್ತಿರುವುದು ನೋಟ ಮಾತ್ರದಿಂದಲೇ ಹೇಳಬಹುದಿತ್ತು. ಅಲ್ಲಿನ ಬಹುತೇಕರು ಅರುಂಧತಿ ಪಿಳ್ಳೈಯನ್ನು ನೋಡಿ ನಗು ತೇಲಿಸುತ್ತಿದ್ದರಲ್ಲದೆ, ಕೈ ಬೀಸಿ ವಿಶ್ ಕೂಡ ಮಾಡುತ್ತಿದ್ದರು.

ನಮ್ಮ ಅರುಂಧತಿ ಪಿಳ್ಳೈ ಹಾಗೂ ಸಿಂಧು ಮೆನನ್ ವಾರದಲ್ಲಿ ನಾಲ್ಕು ಸಾರಿಯಾದರೂ ಇಲ್ಲಿಗೆ ಭೇಟಿ ಕೊಡುತ್ತಾರೆ. ಎಲ್ಲರ ಆರೋಗ್ಯವನ್ನೂ ವಿಚಾರಿಸುತ್ತಾರೆ. ಇಲ್ಲಿನ ಸ್ವಯಂ ಸೇವಕರೊಂದಿಗೆ, ಡಾಕ್ಟರುಗಳೊಂದಿಗೆ ಕೌನ್ಸೆಲಿಂಗ್ ನಡೆಸುತ್ತಾರೆ. ಈ ಇಬ್ಬರಿಂದ ಸ್ಕೂಲ್ ಅದ್ಭುತವಾಗಿ ನಡೆದುಕೊಂಡು ಹೋಗುತ್ತಿದೆ'. ಸುಧೀಂದ್ರ ನಯ್ಯಾರ್ ಕೃತಜ್ಞತೆಗಳನ್ನು ತುಂಬಿಕೊಂಡು ಹೇಳಿದ್ದರು. ನಿಜಕ್ಕೂ ನನಗೆ ಹೃದಯ ತುಂಬಿಬಂದಿತ್ತು. ರಾತ್ರಿ ನನ್ನೊಂದಿಗೆ ಕಳೆದ ಅರುಂಧತಿ ಇವಳೇನಾ ಅನ್ನಿಸಿತ್ತು.

'ನೀವು ತುಂಬಾ ಹೃದಯವಂತರು' ಎಂದಿದ್ದೆ. 'ನೀವು ಯಾವುದೇ ಕಾಲದ ಯಾವುದೇ ದೇಶ, ಧರ್ಮ, ಜಾತಿ, ಸಮುದಾಯಗಳನ್ನೇ ತೆಗೆದುಕೊಳ್ಳಿ, ಶೋಷಣೆಗೆ, ಸಂಕಷ್ಟಗಳಿಗೆ ಬಲಿಯಾಗುವವರು ಥರ್ಡ್ ಎಸ್ಟೇಟ್ ಜನರೇ. ಜಗತ್ತಿನಾದ್ಯಂತ ಊಟ, ಬಟ್ಟೆ, ವಸತಿ, ಸೆಕ್ಸ್, ಸಾವು ಯಾವುದರಲ್ಲೂ ಥರ್ಡ್ ಎಸ್ಟೇಟ್ ಜನ ಸಂಪೂರ್ಣ ತೃಪ್ತಿ, ಸಂಭ್ರಮ, ನೆಮ್ಮದಿಗಳನ್ನು ಕಾಣುವುದಿಲ್ಲ. ಆದರೆ ವಿಚಿತ್ರವೆಂದರೆ ಇವರಲ್ಲಿ ಫಸ್ಟ್ ಮತ್ತು ಸೆಕೆಂಡ್ ಎಸ್ಟೇಟ್ ಜನರಲ್ಲಿ ಇರುವಂತೆ ಮಾನಸಿಕ ವ್ಯಾಧಿ ಅಷ್ಟಾಗಿ ಕಾಡುವುದಿಲ್ಲ. ಹಾಗಾಗಿ ಹುಟ್ಟು ಬಹುತೇಕ ಮಾನವನ ಸುಖ, ದುಃಖ, ಸ್ಥಾನಮಾನಗಳನ್ನು ನಿರ್ಧರಿಸಿಬಿಡುತ್ತದೆ ಅನ್ನಿಸುವುದಿಲ್ಲವೆ? ಆದರೆ ಇನ್ನೊಂದು ವಿಸ್ಮಯಕರವಾದ, ವಿಶಿಷ್ಟ ಸಂಗತಿಯೆಂದರೆ ಥರ್ಡ್ ಎಸ್ಟೇಟ್‌ಗೆ ಸಪೋರ್ಟ್ ಮಾಡೋದು ಯಾವಾಗಲೂ ಫಸ್ಟ್ ಎಸ್ಟೇಟೇ. ಥರ್ಡ್ ಎಸ್ಟೇಟ್‌ನಲ್ಲಿ ಕಾನ್ಫಿಡೆನ್ಸ್ ಮೂಡಿಸುವುದು ಅಷ್ಟು ಸುಲಭದ ಕೆಲಸವಲ್ಲ. ಎಲ್ಲಾ ಜಾತಿಯ, ಧರ್ಮದ, ಸಮುದಾಯದ ಥರ್ಡ್ ಎಸ್ಟೇಟ್‌ಗಳು ಕೂಡ ಒಂದೇ ಸ್ಥರದಲ್ಲೇ ಉಸಿರಾಡುತ್ತಿರುತ್ತವೆ. ನೀವು ಫ್ರಾನ್ಸ್ ಮತ್ತು ರಷ್ಯಾದ ಕ್ರಾಂತಿಗಳನ್ನೇ ತಗೊಳ್ಳಿ... ಅವುಗಳ ನೇತೃತ್ವವನ್ನು ವಹಿಸಿದವರೆಲ್ಲಾ ಫಸ್ಟ್ ಎಸ್ಟೇಟ್‌ನ ನೋಬಲ್ಸೇ. ಈಗಿನ ನಕ್ಸಲ್ ಚಳವಳಿಯನ್ನು ಗಮನಿಸಿದರೂ ಇದು ಸ್ಪಷ್ಟವಾಗುತ್ತದೆ. ಚಳವಳಿಯಲ್ಲಿರುವ ಬಹುತೇಕರು ಅಪ್ಪರ್ ಕ್ಯಾಸ್ಟ್‌ನವರೇ ಅಲ್ಲದೆ ತುಂಬಾ ವಿದ್ಯಾವಂತರು ಕೂಡ. ಅವರು ಯಾವ ಚಿಂತೆಯೂ ಇಲ್ಲದೆ ತಮ್ಮ ತಮ್ಮ ಬದುಕುಗಳನ್ನು ಹಾಯಾಗಿ ಸಾಗಿಸಬಹುದು. ಆದರೆ ಅದೆಲ್ಲವನ್ನೂ ಧಿಕ್ಕರಿಸಿ ಊಟ, ನಿದ್ದೆಯಿಲ್ಲದೆ ಕಾಡುಗಳಲ್ಲಿ ಅಲೆಯುತ್ತಾ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿರುವುದಾಗಿ ಘೋಷಿಸಿಕೊಳ್ಳುವುದಿದೆಯಲ್ಲಾ . . . ಬಹುಶಃ ಮನುಷ್ಯನಿಗೆ ಯೋಚಿಸುವ ಶಕ್ತಿ ಚಿಗುರೊಡೆದಾಗಿನಿಂದಲೂ ಐಡೆಂಟಿಟಿ ಕ್ರೈಸಿಸ್ ಅವನನ್ನು ಕಾಡುತ್ತಲೇ ಇದೆಯೆನಿಸುತ್ತದೆ. ಇತ್ತೀಚೆಗಂತೂ ಜಗತ್ತಿನಾದ್ಯಂತ ಐಡೆಂಟಿಟಿ ಕ್ರೈಸಿಸ್ ಅತಿ ದೊಡ್ಡ ವ್ಯಾಧಿಯಾಗಿ ಪರಿಣಮಿಸಿದೆ. ಒಬ್ಬ ಸಾಮಾನ್ಯ ಮನುಷ್ಯನಿಂದ ಹಿಡಿದು ದೊಡ್ಡ ಜ್ಞಾನಿಯವರೆಗೂ ಈ ವ್ಯಾಧಿ ಇನ್ನಿಲ್ಲದಂತೆ ಆವರಿಸಿಬಿಟ್ಟಿದೆ. ಅಧಿಕಾರದ ಮತ್ತು ಸಂಪತ್ತಿನ ಗಳಿಕೆಯ ಹುಚ್ಚು ಕೂಡ ಈ ಐಡೆಂಟಿಟಿ ಕ್ರೈಸಿಸ್‌ನ ಅತ್ಯಂತ ತೀವ್ರತರವಾದ ಲಕ್ಷಣ'. ಮಾತನಾಡುತ್ತಲೇ ಸುಧೀಂದ್ರ ನಯ್ಯಾರ್ ಊಟ ಮಾಡುತ್ತಿದ್ದರು. ಅವರ ಮಾತುಗಳಲ್ಲಿ ವಿಪರೀತವಾದ ತರ್ಕ ಅಡಗಿದೆಯೆನಿಸಿತ್ತು ನನಗೆ.

'ಹೌದು, ಯೋಚಿಸಬೇಕಾದ ಸಂಗತಿಯೇ ಆಗಿದೆ. ನೀವು ಸಿಕ್ಕಾಪಟ್ಟೆ ಓದಿಕೊಂಡಿರುವಿರಿ. ಇಲ್ಲದಿದ್ದಲ್ಲಿ ಇಷ್ಟೊಂದು ವಿಷಯಗಳ ಬಗ್ಗೆ ಕರಾರುವಕ್ಕಾದ ಜ್ಞಾನ ಸಂಪಾದಿಸೋದು ಸುಲಭ ಸಾಧ್ಯವಾದ ಸಂಗತಿಯೇನೂ ಅಲ್ಲ.' ನಾನೂ ಆಶ್ಚರ್ಯದಿಂದ ಧ್ವನಿಗೂಡಿಸಿ ಮೆಚ್ಚುಗೆಯನ್ನು ಸೂಚಿಸಿದ್ದೆ. 'ಇನ್ನೂ ಒಂದು ಸಂಗತಿಯೆಂದರೆ ಮನುಷ್ಯನಲ್ಲಿ ನಿರಂತರವಾಗಿ ಆವಿರ್ಭವಿಸಿಕೊಂಡಿರುವ ಹಸಿವು ಮತ್ತು ಕಾಮಗಳ ಜೊತೆಗೆ ಅವನ ಬುದ್ಧಿವಂತಿಕೆ ಮತ್ತು ಪ್ರಜ್ಞೆ ಅವನಲ್ಲಿ ಜೀವಸಂಕುಲದ ಬೇರೆಲ್ಲಾ ಜೀವಿಗಳಿಗಿಂತಲೂ ಹೆಚ್ಚಿನ ಸ್ವಾರ್ಥದ ತೀವ್ರತೆಯನ್ನು ತುಂಬಿವೆ. ಹಾಗಾಗಿಯೇ ಯಾವ ಸಿದ್ಧಾಂತಗಳೂ ಅವನೊಂದಿಗೆ ಸ್ಥಿರವಾಗಿ ಇರಲಾರವು. ಪ್ರಜಾಪ್ರಭುತ್ವ, ಕಮ್ಯುನಿಸಂ, ಸೋಷಿಯಲಿಸಂ ಎಲ್ಲಾ ವ್ಯವಸ್ಥೆಗಳೂ ವಿಫಲವಾಗಲಿಕ್ಕೆ ಈ ಸ್ವಾರ್ಥವೇ ಕಾರಣ. ಸ್ವಾರ್ಥದ ಮೇಲ್ಪದರದಲ್ಲೇ ಐಡೆಂಟಿಟಿ ಕ್ರೈಸಿಸ್ ಗಟ್ಟಿಯಾಗಿ ಹೆಪ್ಪು ಕಟ್ಟಿಕೊಂಡಿರುತ್ತದೆ'. ಆತ ಊಟ ಮುಗಿಸಿ ಕೈ ತೊಳೆದುಕೊಂಡಿದ್ದರು.

'ನೀವು ಆತ್ಮಗಳ ಅಸ್ತಿತ್ವದ ಬಗ್ಗೆ ಮಾತನಾಡುತ್ತಾ ಆತ್ಮಗಳು ಸಾಮಾನ್ಯವಾಗಿ ದುರ್ಬಲ ಶರೀರಗಳನ್ನು ಹೊಂದಲು ಇಷ್ಟಪಡುವುದಿಲ್ಲವೆಂದು ಹೇಳಿದ್ದಿರಿ. ಆದರೆ ಜಗತ್ತಿನಲ್ಲಿ ಇಂಥ ಲಕ್ಷಾಂತರ ಶರೀರಗಳು ಜೀವ ತುಂಬಿಕೊಂಡಿವೆ. ಇಂಥ ಶರೀರಗಳನ್ನು ಆಶ್ರಯಿಸುವ ಆತ್ಮಗಳಿಗೆ ಎಚ್ಚರಿಕೆಯ ಅರಿವು ಇರುವುದಿಲ್ಲವೆ.' ನನ್ನನ್ನು ಪ್ರಶ್ನಿಸಿದ್ದಳು ಡಾಕ್ಟರ್ ಅರುಂಧತಿ ಪಿಳ್ಳೈ. ನಮ್ಮಿಬ್ಬರ ಊಟ ಕೂಡ ಮುಗಿದಿತ್ತು.

'ಓಹ್, ಆತ್ಮ ಮತ್ತು ಶರೀರಗಳ ಅನುಸಂಧಾನದ ಬಗ್ಗೆ ಮಾತನಾಡುವುದು ಖಂಡಿತವಾಗಿಯೂ ಗಾಳಿಯನ್ನು ಮುಷ್ಟಿಯಲ್ಲಿ ಗುದ್ದಿದಂತೆಯೇ ಸರಿ. ಕಣ್ಣಿಗೆ ಕಾಣದ ಗಾಳಿಯಲ್ಲಿ ಇನ್ನೂ ಅದೆಷ್ಟು ಅಸಂಖ್ಯಾತ ಅಗೋಚರ ಸಂಗತಿಗಳು ಅಡಗಿಕೊಂಡಿವೆಯೋ. ಸೃಷ್ಟಿಯ ಎಲ್ಲಾ ರಹಸ್ಯಗಳು ಯಾವ ಕಾಲಕ್ಕೂ ಬಯಲಾಗುವುದಿಲ್ಲವೆಂಬುದು ಮಾತ್ರ ಸತ್ಯ' ಎಂದು ಸುಧೀಂದ್ರ ನಯ್ಯಾರ್ ಅವರ ಮಾತು ಮುಗಿಯುವುದರೊಂದಿಗೆ ಮೂವರೂ ಅವರ ಚೇಂಬರ್ ಹೊಕ್ಕಿದ್ದೆವು. ಅರುಂಧತಿ ಹೊರಡಲು ಅನುವಾದಳು. ನಾನು ಸುಧೀಂದ್ರ ನಯ್ಯಾರರ ಕೈ ಕುಲುಕಿ, 'ದಿ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್ ಟೈಟಲ್ ತುಂಬಾ ಚೆನ್ನಾಗಿ ಫೋರ್ಸ್ ತುಂಬಿಕೊಂಡಿದೆ ಸಾರ್. ನಿಮ್ಮನ್ನು ಭೇಟಿಯಾಗಿದ್ದು ನನಗೆ ಒಂದು ಹೆಮ್ಮೆಯ ಸಂಗತಿಯೇ ಸರಿ' ಎಂದಿದ್ದೆ.

'ಅವೆಲ್ಲ ನಮ್ಮ ಆತ್ಮತೃಪ್ತಿಗಾಗಿಯೋ, ಸೆಲ್ಫ್

## ಇಲ್ಲಿಯವರೆಗೆ...



ಮಳೆ ಸುರಿವ ರಾತ್ರಿಯಲ್ಲಿ ಡಾ. ಅರುಂಧತಿ ಪಿಳ್ಳೈ ಜೊತೆಗಿನ ಸಾಂಗತ್ಯ ಕಿರಣ್ ರೆಡ್ಡಿಯ ಮೈಮನಗಳನ್ನು ಪುಳಕಗೊಳಿಸಿದವು. ಕಳೆದ ಮಳೆಗಾಲದಲ್ಲಿ ಕೇರಳದಲ್ಲಿ ಸುರಿದ ಭಾರೀ ಮಳೆ ಉಂಟುಮಾಡಿದ ಪ್ರವಾಹ ಹಾಗೂ ಅದರಿಂದ ಉಂಟಾದ ಹಾನಿಯ ಬಗ್ಗೆ ಅರುಂಧತಿ ಹೇಳಿದ್ದನ್ನು ಕಿರಣ್ ರೆಡ್ಡಿ ಕುತೂಹಲದಿಂದ ಕೇಳಿಸಿಕೊಂಡ. ದೇಹದ ಆಕರ್ಷಣೆಗಳ ಬಗ್ಗೆ, ಸೃಷ್ಟಿಯ ಬೆಡಗು ಬೆರಗಿನ ಬಗ್ಗೆ ಚರ್ಚಿಸುತ್ತಾ ಇಬ್ಬರೂ ಸುಖವನ್ನು ಸೂರೆಗೊಂಡರು. ಹೊರಡುವ ಮುನ್ನ, ಕೆ.ಎಮ್. ನಯ್ಯಾರ್ ಅವರು ಎದುರಿಸುತ್ತಿರುವ ಭ್ರಷ್ಟಾಚಾರದ ಆರೋಪದ ಬಗ್ಗೆ ಹೇಳಿದ ಅರುಂಧತಿ, ಕಿರಣ್ ರೆಡ್ಡಿಯಿಂದ ರಾಜಕೀಯ ಪ್ರಭಾವದ ಸಹಾಯವನ್ನು ಅಪೇಕ್ಷಿಸಿದಳು.